ಹೌದು. ಕಳೆದ ೩ ವರ್ಷಗಳಲ್ಲಿ ಕಂಪನಿಯು ನಿವ್ವಳ ಲಾಭ ಗಳಿಸಿದೆ.

ಆ) ೧೯೮೧-೮೨ ೨.೬೮ ಲಕ್ಷ ರೂ.ಗಳು
೧೯೮೨-೮೩ ೪.೩೭ ಲಕ್ಷ ರೂ.ಗಳು
೧೯೮೩-೮೪ ೦.೬೪ ಲಕ್ಷ ರೂ.ಗಳು (ತಪಾಸಣೆಗೆ ಒಳಗಾದಂತೆ)

ದೂರುಗಳು ಬಂದಿದ್ದರಿಂದ, ಈ ವಿಷಯದಲ್ಲಿ ತನಿಖೆ ಮಾಡಿಸಲಾಗುತ್ತಿದೆ.

ರಾಜ್ಯದ ಪಟ್ಟಣಗಳಲ್ಲಿ ಕುಡಿಯುವ ನೀರಿನ ಸರಬರಾಜಿಗಾಗಿ ಮಾಡಿದ ಖರ್ಚಿನ ಬಗ್ಗೆ

೯೨೬. ಮಾನ್ಯ ಶ್ರೀ ಜಿ. ರಾಜೂಗೌಡ (ಹನೂರು) ಈ ಕೆಳಕಂಡ ಪ್ರಶ್ನೆಗಳಿಗೆ ನಗರಾಭಿವೃದ್ಧಿ ಕಾನೂನು ಹಾಗೂ ಸಂಸದೀಯ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ?

ರಾಜ್ಯದ ಪಟ್ಟಣಗಳಲ್ಲಿ ಕುಡಿಯುವ ನೀರಿನ ಸರಬರಾಜಿನ ಬಗ್ಗೆ ಸರ್ಕಾರವು ಇದುವರೆವಿಗೆ ಖರ್ಚು ಮಾಡಿರುವ ಹಣವೆಷ್ಟು ಇದರಿಂದ ಸರಾಸರಿ ಪ್ರಜೆಗೆ ಎಷ್ಟು ಹಣ ಖರ್ಚು ಮಾಡಿದಂತಾಗುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್, (ನಗರಾಭಿವೃದ್ಧಿ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಗಳು).—

ರಾಜ್ಯದ ಪಟ್ಟಣಗಳಲ್ಲಿ (ಬೆಂಗಳೂರು ನಗರವನ್ನು ಬಿಟ್ಟು) ಕುಡಿಯುವ ನೀರಿನ ಸರಬರಾಜಿನ ಬಗ್ಗೆ ರೂ. ೫೨೨೩.೩೭ ಲಕ್ಷ ವೆಚ್ಚ ಮಾಡಿದೆ. ಇದರಿಂದ ೧೯೮೧ರ ಜನಗಣತಿಯ ಪ್ರಕಾರ ಸರಾಸರಿ ಒಟ್ಟು ಪ್ರಜೆಗೆ ರೂ ೬೮.೬೫ ವೆಚ್ಚ ಮಾಡಿದಂತಾಗುತ್ತದೆ.

ಬೆಂಗಳೂರು ನಗರಕ್ಕೆ ಕುಡಿಯುವ ನೀರನ್ನು ಸರಬರಾಜು ಮಾಡಲು ಇಲ್ಲಿಯವರೆಗೆ ರೂ. ೧೦೮ ಕೋಟಿ ಹಣವನ್ನು ಖರ್ಚು ಮಾಡಲಾಗಿದೆ. ಇದು ಈಗಿನ ಬೆಂಗಳೂರು ನಗರದ ಜನ ಸಂಖ್ಯೆಯಾದ ೫೮ ಲಕ್ಷಕ್ಕೆ ಹೋಲಿಸಿದರೆ ಸರಾಸರಿ ಒಬ್ಬ ಪ್ರಜೆಗೆ ತಗಲುವ ವೆಚ್ಚ ರೂ. ೨೮೪,೦೦

ಸುಳ್ಯದಲ್ಲಿ ಸರಕಾರಿ ಬಸ್ಸು ನಿಲ್ದಾಣ ನಿರ್ಮಿಸುವುದು

೧೨೫೬. ಶ್ರೀ ಕೆ. ಕುಶಾಲ (ಸುಳ್ಯ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಸಾರಿಗೆ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯದಲ್ಲಿ ಸರಕಾರಿ ಬಸ್ಸು ನಿಲ್ದಾಣ ನಿರ್ಮಾಣಕ್ಕೆ ಮಂಜೂರಾತಿ ನೀಡಲಾಗಿದೆಯೇ.

ಆ) ಹಾಗಿಲ್ಲದಿದ್ದಲ್ಲಿ, ಸರಕಾರಿ ಬಸ್ಸು ನಿಲ್ದಾಣ ನಿರ್ಮಿಸಲು ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಪಿ.ಜಿ.ಆರ್, ಸಿಂಧ್ಯ (ಸಾರಿಗೆ ಮತ್ತು ವಸತಿ ಮಂತ್ರಿಗಳು). —

ಅ) ಇಲ್ಲ.

ಆ) ಇಲ್ಲ.

ಗ್ರಾಮಾಂತರ ಸ್ಥಳಗಳಿಗೆ ಸಾರಿಗೆ ಸಾಕರ್ಯ ಒದಗಿಸುವುದು.

೧೩೦೨. ಶ್ರೀ ಕೆ. ಕುಶಾಲ (ಸುಳ್ಯ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಸಾರಿಗೆ ರಾಜ್ಯ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ?

ಅ) ಮಲೆನಾಡಿನ ಪ್ರದೇಶಗಳಲ್ಲಿ ಅದರಲ್ಲೂ ಸುಳ್ಯದಂತಹ ತಾಲ್ಲೂಕಿನ ಗ್ರಾಮಾಂತರ ಸ್ಥಳಗಳಿಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸುಗಳ ಸೌಲಭ್ಯವಿಲ್ಲದೆ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಈ ತೊಂದರೆಯನ್ನು ನೀಗಿಸಲು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ಸಾಧ್ಯವಾಗದ ಇದ್ದಲ್ಲಿ ಖಾಸಗಿಯವರಿಗೆ ಅನುಮತಿಯನ್ನು ನೀಡಲು ಸರ್ಕಾರಕ್ಕೆ ಇರುವ ಅಡಚಣೆಗಳೇನು?

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಾರಿಗೆ ಮತ್ತು ವಸತಿ ಮಂತ್ರಿಗಳು).

ಅ) ಸಾಕಷ್ಟು ಸಾರಿಗೆ ಸೌಕರ್ಯವನ್ನು ಒದಗಿಸಲಾಗಿದೆ.

ಆ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.